**ದಿನಾಂಕಃ 04-05-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ- ಆರೋಪಿಯ ಪರ ಶ್ರೀ.ಎಸ್.ಆರ್.ಎನ್, ವಕೀಲರಿಂದ ಃ -**

9. ನಾನು 2021 ನೇ ಇಸವಿಯ ಜೂನ್ ತಿಂಗಳಿನ ಮೊದಲನೇ ವಾರದಲ್ಲಿ ಆರೋಪಿಗೆ ರೂ. 12 ಲಕ್ಷ ಹಣವನ್ನು ನೀಡಿರುತ್ತೇನೆ. ಆರೋಪಿಯು ಯಾವ ಸ್ಥಳದಲ್ಲಿ ಮತ್ತು ಯಾವ ಹೆಸರಿನಲ್ಲಿ ವಾಟರ್ ಸೇಲ್ಸ್ ಮತ್ತು ಪ್ಯೂರಿಪೈಯರ್ ಕೆಲಸವನ್ನು ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ವಿಳಾಸ ಯಾವುದು ಎಂದರೆ ಸಾಕ್ಷಿಯು ನಾಗರಭಾವಿಯಲ್ಲಿ ಇರುವ ಹನುಮೇಗೌಡ ನಿಲಯದಲ್ಲಿ ಆರೋಪಿಯು ವಾಸಿಸುತ್ತಿದ್ದಾರೆ ಎನ್ನುತ್ತಾರೆ. ಆರೋಪಿಯ ಮನೆಯ ಸಮೀಪದಲ್ಲಿ ಇರುವ ಲ್ಯಾಂಡ್ ಮಾರ್ಕ್ ಯಾವುದು ಎಂದು ನನಗೆ ಗೊತ್ತಿಲ್ಲ. ಆರೋಪಿಯು ಬಿ.ಬಿ.ಎಂ.ಪಿ ಕಾಂಟ್ರ್ಯಾಕ್ಟ್ ಕೆಲಸ ಮಾಡುತ್ತಾರೆ, ಆದರೆ ಕಛೇರಿಯ ವಿಳಾಸ ನನಗೆ ಗೊತ್ತಿಲ್ಲ. ಆರೋಪಿಯು ಮತ್ತು ನೀವು ಎಂದಿಗೂ ಸಹ ಬೇಟಿ ಅಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಯ ಮನೆಯ ವಿಳಾಸ ಮತ್ತು ಕಛೇರಿಯ ವಿಳಾಸ ನಿಮಗೆ ಗೊತ್ತಿಲ್ಲದೇ ಇರುವ ಕಾರಣ ನೀವು ಸುಳ್ಳು ಸಾಕ್ಷ್ಯಾ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

10. ಆರೋಪಿಯು ಸವಿತ ಮತ್ತು ಪುನೀತ್ ರವರ ಕಡೆಯಿಂದ 2019 ನೇ ಇಸವಿಯ ಜನವರಿ ತಿಂಗಳಿನಲ್ಲಿ ನನಗೆ ಪರಿಚಯವಾಗಿದ್ದಾರೆ. 2020 ನೇ ಇಸವಿಯ ಮಾರ್ಚ್ ತಿಂಗಳಿನಿಂದ ಸದರಿ ವರ್ಷ ಮುಗಿಯುವವರೆಗೂ ಮತ್ತು 2021 ನೇ ಇಸವಿಯ ಮಧ್ಯದಲ್ಲಿ ಕೊರೋನಾ

ಇದ್ದ ಕಾರಣ ಸಾರ್ವಜನಿಕರ ಓಡಾಟವನ್ನು ಸರ್ಕಾರವು ನಿಷೇದ ಗೊಳಿಸಿತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಅವದಿಯಲ್ಲಿ ವ್ಯವಹಾರ ಮತ್ತು ವ್ಯಾಪಾರಗಳು ತಾತ್ಕಾಲಿಕವಾಗಿ ನಿಂತಿತ್ತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

11. 2023 ನೇ ಇಸವಿಯ ಜೂನ್ ತಿಂಗಳಿನ ಮೊದಲನೇ ವಾರದಲ್ಲಿ ಆರೋಪಿಯು ನನಗೆ ಚಕ್ಕನ್ನು ನೀಡಿದರು. ನಾನು ಆರೋಪಿಯಿಂದ ನಾನು ನೀಡಿರುವ ಹಣದ ಭದ್ರತೆಗಾಗಿ ಯಾವುದೇ ಪತ್ರವನ್ನು ಮಾಡಿಸಿಕೊಂಡಿರುವುದಿಲ್ಲ, ಆದರೆ ನಾನು ಶೇ. ಒಂದೂವರೆ ಪರ್ಸೆಂಟ್ ಬಡ್ಡಿ ದರದಲ್ಲಿ ಆರೋಪಿಗೆ ಹಣವನ್ನು ನೀಡಿರುತ್ತೇನೆ. ನಾನು ಆರೋಪಿಗೆ ಬಡ್ಡಿ ದರದಲ್ಲಿ ಹಣವನ್ನು ನೀಡಿದ್ದೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ, ಆದರೆ ಪ್ರತಿ ತಿಂಗಳ ಮೊದಲನೇ ವಾರದಲ್ಲಿ ಅರೋಪಿಯು ನನಗೆ ಬಡ್ಡಿಯನ್ನು ಪಾವತಿ ಮಾಡುತ್ತಿದ್ದರು. ಆರೋಪಿಯಿಂದ ನಾನು ಪ್ರತಿ ತಿಂಗಳು ಬಡ್ಡಿಯನ್ನು ಪಡೆದುಕೊಳ್ಳುತ್ತಿದ್ದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ.

12. ನನ್ನ ವಾರ್ಷಿಕ ಆದಾಯದಲ್ಲಿ ನಿಪಿ-1 ರಲ್ಲಿ ನಮೂದಿಸಿರುವ ನನಗೆ ದೊಡ್ಡದಾದ ಹಣವಾಗಿರುತ್ತದೆ. ನಾನು ಯಾವ ಆದಾರವನ್ನು ಇಟ್ಟುಕೊಳ್ಳದೇ ಆರೋಪಿಗೆ ಹಣವನ್ನು ನೀಡಿದ್ದೇನೆ. ನಿಮಗೆ ಆರೋಪಿಯು ಯಾರು ಎಂದು ಗೊತ್ತಿಲ್ಲದೇ ಇರುವ ಕಾರಣ ನೀವು ಯಾವುದೇ ಆದಾರವನ್ನು ನ್ಯಾಯಾಲಯಕ್ಕೆ ತೋರಿಸುತ್ತಿಲ್ಲ ಮತ್ತು ಬೇರೆಯವರ ಮಾತನ್ನು ಕೇಳಿಕೊಂಡು ಆರೋಪಿಯ ವಿರುದ್ದ ಈ ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

ಪುನೀತ್ ಮತ್ತು ಸವಿತ ರವರು ಸಂಬಂಧಿಕರಾಗಿರುತ್ತಾರೆ. ಸವಿತ ನಿಮ್ಮ ತಂಗಿಯ ಯವರ ಮಗಳು ಮತ್ತು ಪುನೀತ್ ರವರು ಸವಿತಾರವರ ಸಂಬಂಧಿ ಆಅಗಿರುವ ಕಾರಣದಿಂದ ನೀವೆಲ್ಲಾರು ಸಹ ಒಳ್ಳೆಯ ಒಡನಾಟವನ್ನು ಇಟ್ಟುಕೊಂಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

13. ಪುನೀತ್ ಮತ್ತು ಅರೋಪಿಯು ಹಣಕಾಸಿನ ವ್ಯವಹಾರವನ್ನು ಮಾಡುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಯು ಪುನೀತ್ ರವರಿಗೆ 3 ಚಕ್ಕುಗಳನ್ನ ನೀಡಿದ್ದರು, ಅದರ ಪೈಕಿ ಒಂದು ಚಕ್ಕುನ್ನು ಪುನೀತ್ ರವರು ನಿಮಗೆ ನೀಡಿ ಈ ಸುಳ್ಳು ಪ್ರಕರಣವನ್ನು ನಿಮ್ಮ ಮೂಲಕ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ನನ್ನ ಸ್ನೇಹಿತರು ಮತ್ತು ಪರಿಚಯಸ್ಥರಿಗೆ ಹಣವನ್ನು ನೀಡಿದಾಗ ಸದರಿ ಹಣವನ್ನು ಮರುಪಾವತಿ ಮಾಡಲು ನಾನು 5 ರಿಂದ 8 ತಿಂಗಳುಗಳ ಸಮಯ ನೀಡುತ್ತೇನೆ, ಸದರಿ ಹಣಕ್ಕೆ ಅವರು ಬಡ್ಡಿಯನ್ನು ಪಾವತಿ ಮಾಡುತ್ತಾರೆ. ನಾನು ಹಣದ ಲೇವಾದೇವಿ ನಡೆಸಲು ಯಾವುದೇ ಪರವಾನಿಗೆಯನ್ನು ಹೊಂದಿರುವುದಿಲ್ಲ. ನಾನು ನಂಬಿಕೆಯ ಆದಾರದ ಮೇಲೆ ಬಡ್ಡಿದರವನ್ನು ನಗದೀ ಮಾಡುತ್ತೇನೆ. ನಾನು ಎಲ್ಲರಿಂದಲೂ ಶೇ. ಒಂದೂವರೆ ಪರ್ಸೆಂಟ್ ಹಣವನ್ನು ಪಡೆದುಕೊಳ್ಳುತ್ತೇನೆ. ನೀವು ಪರವಾನಿಗೆ ಇಲ್ಲದೆ ಬಡ್ಡಿ ವ್ಯವಹಾರನ್ನು ಮಾಡುತ್ತಿರುವ ಕಾರಣ ನೀವು ಕಾನೂನಿನ ಪ್ರಕಾರ ಅಪರಾಧವನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

14. ನೀವು ನಿಮ್ಮ ಮುಖ್ಯ ವಿಳಿಚಾರಣೆಯ ಪ್ರಮಾಣ ಪತ್ರದಲ್ಲಿ ಆರೋಪಿಗೆ ವ್ಯವಹಾರವನ್ನು ಮಾಡಲು ಹಣವನ್ನು ನೀಡಿದ್ದೇ ಒಂದು ಹೇಲೀಳುತ್ತೀರಾ, ಯಾವ ವ್ಯವಹಾರಕ್ಕಾಗಿ ಆರೋಪಿಗೆ ಹಣವನ್ನು

ನೀಡಿರುತ್ತೀರಾ ಎಂದರೆ ಸಾಕ್ಷಿಯು ಬಿ.ಬಿ.ಎಂ.ಪಿ ಯಲ್ಲಿ ಕಾಂಟ್ರ್ಯಾಕ್ಟ ಮತ್ತು ವಾಟರ್ ಸೇಲ್ಸ್ ಕೆಲಸಕ್ಕಾಗಿ ಆರೋಪಿಯು ತನ್ನಿಂದ ಹಣವನ್ನು ಪಡೆದುಕೊಂಡಿದ್ದಾರೆ ಎನ್ನುತ್ತಾರೆ. ನಾನು ಯಾರಿಗಾದರೂ ಹಣವನ್ನು ನೀಡಬೇಕಾದಾರೆ ಅವರಿಗೆ ಸದರಿ ಹಣವನ್ನು ಮರುಪಾವತಿ ಮಾಡುವ ಶಕ್ತಿ ಇದೆಯಾ ಎಂದು ನೋಡುತ್ತೇನೆ ಮತ್ತು ನಾನು ನನ್ನ ಸ್ನೇಹಿತರು ಮತ್ತು ಸಂಬಂಧಿಕರಿಗೆ ಮಾತ್ರ ಹಣವನ್ನು ನೀಡುತ್ತೇನೆ. ಆರೋಪಿಯ ತಿಂಗಳಿನ ಅದಾಯದ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಆರೋಪಿಯ ತಿಂಗಳಿನ ಆದಾಯದ ಬಗ್ಗೆ ಪರಿಶೀಲನೆ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿಯು ಬಿ.ಬಿ.ಎಂ.ಪಿ ಯ ಕಾಂಟ್ರ್ಯಾಕ್ಟ್ ಕೆಲಸ ಮಾಡುತ್ತಿರುವ ಬಗ್ಗೆ ಪರಿಶೀಲನೆ ಮಾಡಲು ನನಗೆ ಯಾವುದೇ ರೀತಿಯ ತೊಂದರೆ ಇರಲಿಲ್ಲ. ನನಗೆ ಇಬ್ಬರೂ ಮಕ್ಕಳು ಇದ್ದಾರೆ. ಅವರಿಬ್ಬರೂ ಕೆಲಸಕ್ಕೆ ಹೋಗುತ್ತಿದ್ದಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**